



ಅರುಣ ಪಿ. ಭಟ್ಟ


## ವಾರಭವಿಷ್ಯ: 27.02.2025ರಿಂದ 05.03.2025ರವರೆಗೆ




ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಉದ್ಯೋಗ ವಿಚಾರದಲ್ಲಿ ಅದ್ಭುತ ಯಶಸ್ಸಿನೊಂದಿಗೆ ವಾರದ ಆರಂಭ ಆಗುವ ಸಾಧ್ಯತೆ ಇದೆ. ಮಕ್ಕಳ ಬಗ್ಗೆ ನಿಮ್ಮ ಗಮನ ಹಾಗೂ ಅವರ ಪರಿಸರವನ್ನು ನೀವು ಉತ್ತಮವಾಗಿಟ್ಟುಕೊಳ್ಳುವ ಮನಸ್ಥಿತಿಯನ್ನು ರೂಪಿಸುವುದು ಒಳ್ಳೆಯದು. ಕೆಲಸಗಳಿಂದ ಸಾರ್ಥಕತೆಯ ಭಾವನೆ ನಿಮ್ಮಲ್ಲಿ ಕಾಣಬಹುದು. ಶುಭದಿನ: 28. ಗೋಪೂಜೆ ಮಾಡಿರಿ. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.




ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ಹಾಗೂ ಆದಾಯ ವೃದ್ಧಿಯಾಗಲಿದೆ. ನೀವು ಒಬ್ಬರಿಗೆ ಒಳ್ಳೆಯದು ಬಯಸಿದರೆ ಅದನ್ನು ಕೆಲವರು ಅಪಹಾಸ್ಯದಿಂದ ನೋಡಬಹುದು. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ಕುಟುಂಬದಲ್ಲಿ ಸಂತೋಷ ಇರುತ್ತದೆ. ಉದ್ಯೋಗ ವಿಚಾರದಲ್ಲಿ ಯಶಸ್ಸು ನಿಮ್ಮ ಮನೆಯ ಬಾಗಿಲು ಬಡಿಯುತ್ತದೆ. ಶುಭದಿನ: 03. ಹನುಮಾನ್ ಚಾಲೀಸ್ ಪಠಿಸಿರಿ.





ಈ ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಈ ಅವಧಿಯಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಳ್ಳಿ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ವರ್ತನೆಗಳು ನಿಮ್ಮ ಮನದಲ್ಲಿ ಬೇಸರ ತರಿಸಲಿದೆ. ಶುಭದಿನ: 04. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ಮಾಡುವ ಕಾರ್ಯದಲ್ಲಿ ಅನಗತ್ಯ ತೊಂದರೆ ಬರಬಹುದು. ಆದಷ್ಟು ಸಮಸ್ಯೆಗೆ ಪರಿಹಾರ ಹುಡುಕಿ. ಕೆಲವು ಕಾರ್ಯಗಳನ್ನು ನೀವೇ ಸ್ವತಃ ನಿಂತು ಮಾಡುವುದು ಒಳಿತು. ಕಾನೂನು ವ್ಯಾಜ್ಯಗಳು ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನ ಮಾಡುತ್ತೀರಿ. ಹೂಡಿಕೆ, ಸಂಪತ್ತು ವಿಸ್ತರಣೆ ಹಾಗೂ ವಿದೇಶಿ ವ್ಯವಹಾರದಲ್ಲಿ ನೀವಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಶುಭದಿನ: 02. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವೇಚನಾರಹಿತ ಹೂಡಿಕೆಗಳಿಂದ ನಷ್ಟ ಆಗುವ ಸಂಭವ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದವು ಅತಿಶಯೋಕ್ತಿಯಾಗಿ ಕಾಣಬಹುದು. ಎಲ್ಲರ ಮಾತಿಗೆ ಪ್ರಾಧಾನ್ಯತೆ ನೀಡಿ ಮುನ್ನಡೆಯಿರಿ. ನಿಮ್ಮಲ್ಲಿ ಹೊಳೆಯುವ ಆಲೋಚನೆ ಉತ್ತಮ ಪರಿಕಲ್ಪನೆಯಾಗಿದ್ದು ಇದರಿಂದ ಅನುಕೂಲಗಳು ಕಾಣಸಿಗಲಿವೆ. ಉತ್ಸಾಹ ಮಾಮೂಲಿಗಿಂತ ಹೆಚ್ಚಾಗಿ ಇರುತ್ತದೆ. ಶುಭದಿನ: 01. ವಿಷ್ಣು ಸಹಸ್ರನಾಮ ಓದಿರಿ.





ಕೆಲಸದಲ್ಲಿ ಹೆಚ್ಚಿನ ವಿಳಂಬದಿಂದ ನಿಮ್ಮ ಬಗ್ಗೆ ಹಲವರು ಹಲವಾರು ಮಾತುಗಳನ್ನಾಡುವರು. ಕೆಲ ವಿಚಾರದಲ್ಲಿ ಅತಿ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆಯಿದೆ. ವ್ಯಾಪಾರ ವಿಸ್ತರಣೆಗೆ ಆಲೋಚನೆ ಮಾಡುತ್ತೀರಿ. ಕಾನೂನು ಕಟ್ಟಲೆಗಳು ನಡೆಯುತ್ತಿದ್ದಲ್ಲಿ ನಿಮ್ಮ ಪರವಾಗಿ ವಾದ ಬಲಗೊಳ್ಳಲಿದೆ. ಶುಭದಿನ: 04. ನವದುರ್ಗಾ ಆರಾಧನೆ ಮಾಡಿರಿ.





ಹಿರಿಯರ ಬಗ್ಗೆ ಗೌರವ ನೀಡುವುದು ಒಳ್ಳೆಯದು. ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಣ ಮಾಡುವುದು ಒಳ್ಳೆಯದು. ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳು ಕಂಡುಬರುತ್ತದೆ. ಇನ್ನು ಮ್ಯಾನೇಜ್‌ಮೆಂಟ್, ವಾಣಿಜ್ಯ, ಸ್ಪರ್ಧಾತ್ಮಕ ಕ್ಷೇತ್ರದಲ್ಲೂ ಯಶಸ್ಸು ದೊರೆಯಲಿದೆ. ನಿಮ್ಮ ಶ್ರಮಕ್ಕೆ ಉತ್ತಮ ಫಲಿತಾಂಶ ಸಿಗಲಿದೆ. ಶುಭದಿನ: 04. ಆದಿತ್ಯ ಹೃದಯ ಪಠಿಸಿರಿ.





ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ರಾಜೀಪಂಚಾಯಿತಿಗಳಲ್ಲಿ ಹೋಗದಿರುವುದು ತುಂಬಾ ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವ ಜನ ಕಂಡುಬರುತ್ತಾರೆ. ಆದಷ್ಟು ದೂರದಲ್ಲಿ ನಿಲ್ಲಿ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ನಿಮ್ಮ ಸಾಮರ್ಥ್ಯಕ್ಕೆ ಇತರರು ಬೆರಗಾಗುತ್ತಾರೆ. ಮನೆಯಲ್ಲಿ ಕಾರ್ಯಕ್ರಮ ಆಯೋಜಿಸುವ ಸಾಧ್ಯತೆ. ಶುಭದಿನ: 02. ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿರಿ.





ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ನಿಮ್ಮ ಹಲವು ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಸಂದರ್ಶನಗಳಲ್ಲಿ ಯಶ ಸಾಧಿಸುತ್ತೀರಿ. ಕುಟುಂಬ ಸದಸ್ಯರು ಹಾಗೂ ಸಂಬಂಧಿಕರ ಜೊತೆ ಸೌಹಾರ್ದಯುತವಾದ ಬಾಂಧವ್ಯ ಇರುತ್ತದೆ. ಶುಭದಿನ: 04. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹೊಸ ಯೋಜನೆಗೆ ಈಗಿನಿಂದಲೇ ಸಿದ್ಧತೆ ನಡೆಸುವುದು ಒಳ್ಳೆಯದು. ಪಶುಸಂಗೋಪನೆ, ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆರ್ಥಿಕ ಸಹಕಾರಕ್ಕಾಗಿ ಆತ್ಮೀಯರ ಬಳಿ ಕೇಳುವ ಸಾಧ್ಯತೆ ಇದೆ. ವಾರದ ಶುರುವಿನಲ್ಲಿ ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆ ಇದೆ. ಹಣಕಾಸು ಹೂಡಿಕೆಯಲ್ಲಿ ನಿಮಗೆ ಅನುಕೂಲವಾಗಲಿದೆ. ಶುಭದಿನ: 05. ಕಾಲಭೈರವನ ಸೇವೆ ಮಾಡಿರಿ.




ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತವಾಗಿ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ. ಸಮಸ್ಯೆಗಳ ಸುಳಿಯಿಂದ ಹೊರಬರಲು ಪ್ರಯತ್ನ ಮೆಚ್ಚುವಂಥದ್ದು. ಮನೆಗೆ ನೆಂಟರಿಷ್ಟರ ಆಗಮನ ಸಾಧ್ಯತೆ. ಶುಭದಿನ: 02. ಶನಿಸ್ತೋತ್ರ ಪಠಿಸಿರಿ.




ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತವೆ. ನಿಮ್ಮ ಕ್ರಿಯಾಶೀಲತೆಯಿಂದ ಹೊಸತಾದ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ಯಶಸ್ವಿದಾಯಕ ನಿರ್ಣಯಗಳಿಂದ ಸ್ಥಾನ ಗಟ್ಟಿಗೊಳಿಸಿಕೊಳ್ಳುವಿರಿ. ನಿಮ್ಮ ಶ್ರಮವನ್ನು ಗುರುತಿಸಲಾಗುತ್ತದೆ. ಶುಭದಿನ: 01. ಗಣಪತಿಗೆ ದೂರ್ವಾರ್ಚನೆ ಮಾಡಿರಿ.